ಮಾಡಿಕೊಂಡಿದ್ದಾರೆ. ಇಬ್ಬರೂ ತುಂಬಾನೆ ಆಕ್ಟೀವ್ ಆಗಿದ್ದಾರೆ. ವಿಲೇಜ್ ಬ್ಯಾಕ್‌ಗ್ರೌಂಡಿನ ಬ್ಯಾಕ್ವರ್ಡ್ ಕಮ್ಯುನಿಟಿ ಹುಡುಗರು. ಒಬ್ಬನ ಹೆಸರು ತೇಜಸ್ವಿ ಅಂತ. ಇನ್ನೊಬ್ಬನ ಹೆಸರು ಅಜಯ್...

ಟ್ರೈನಿಗಳಲ್ಲಿ ಇಬ್ಬಿಬ್ಬರನ್ನು ಒಂದೊಂದು ಸೆಕ್ಷನ್‌ಗೆ ಹಾಕಿದ್ದೇನೆ. ಮೂರು ತಿಂಗಳು ಅಲ್ಲಿ ಕೆಲಸ ಮಾಡಲಿ ಅಂತ. ಪ್ರೊಬೆಷನರಿಗಳಿಬ್ಬರೂ ಜನರಲ್ ಡೆಸ್ಕ್‌ನಲ್ಲಿ ಓಂಪ್ರಕಾಶ್ ಶಿಫ್ಟ್‌ನಲ್ಲಿದ್ದಾರೆ. ಇಬ್ಬರೂ ಚೆನ್ನಾಗಿ ಬರೀತಾರೆ. ಪಾಲಿಟಿಕ್ಸು, ಫಾರಿನ್ ಅಫೇರ್ಸ್ ಚೆನ್ನಾಗಿ ಗೊತ್ತಿದೆ.

ಲಾಸ್ಟ್‌ವೀಕ್ ಓಂಪ್ರಕಾಶ್ ಜತೆ ಇವರಿಬ್ಬರೇ ನೈಟ್‌ಶಿಫ್ಟ್‌ನಲ್ಲಿ ಎರಡು ಸಲ ಲೀಡ್ ಚೇಂಜ್ ಮಾಡಿ ಎಡಿಷನ್ ಮಾಡಿದ್ದಾರೆ! ಇಷ್ಟು ಚುರುಕಾಗಿರೋ ಬಿಗಿನರ್ಸ್‌ಗಳನ್ನು ನನ್ನ ಸರ್ವೀಸ್‌ನಲ್ಲೇ ನೋಡಿಲ್ಲ. ಯಾವುದೇ ಕಾಪಿಗಳನ್ನು ಕೊಟ್ಟರೂ ಬೇಗ ಟ್ರಾನ್ಸ್‌ಲೇಟ್ ಮಾಡ್ತಾರೆ ಅಂತ ಓಂಪ್ರಕಾಶ್ ಹೇಳ್ತಿದ್ರು... ಇಂಗ್ಲಿಷೂ ಚೆನ್ನಾಗಿದೆಯಂತೆ. ಆದರೆ, ಇಬ್ಬರೂ ಸ್ವಲ್ಪ ಹೆಡ್‌ಲಾಂಗ್‌ಗಳು... ಸೆನ್ಸ್ ಆಫ್ ಹ್ಯೂಮರ್ ಜಾಸ್ತಿ ಇದೆ. ಅವರಿಂದ ಕಿರಿಕಿರಿ ಆಗ್ತಾ ಇದೆ ಅಂತ ಕಂಪ್ಲೇಂಟ್ ಬರೋಕೆ ಶುರುವಾಗಿದೆ. ಅವರ ಬಗ್ಗೆ ನಿಮ್ಮತ್ರ ಮಾತಾಡಬೇಕು ಅಂತಿದ್ದೆ. ಅಷ್ಟರಲ್ಲಿ ನೀವೇ ಕೇಳಿದಿರಿ...' ಅನ್ನುತ್ತ ಸಂಪಾದಕರ ಮುಖ ನೋಡಿದರು.

'ಇಬ್ಬರದೂ ಇಂಗ್ಲಿಷ್ ಚೆನ್ನಾಗಿದೆ ಅಂತೀರಿ. ಅವರು ನಮ್ಮ ಪತ್ರಿಕೆಗೆ ಸೇರಿದ್ದು ಯಾಕಂತೆ? ಅವರು ಹೆಚ್ಚು ದಿನ ನಮ್ಮಲ್ಲಿ ಉಳಿಯಲ್ಲ ಅನ್ಸುತ್ತೆ. ಅವರ ಬ್ಯಾಕ್‌ಗ್ರೌಂಡ್ ಏನು ಅಂತ ವಿಚಾರಿಸಿ' ಅಂದರು.

'ಸರ್, ಇಬ್ಬರ ಅಪ್ಲಿಕೇಶನ್‌ಗಳನ್ನು ತರಿಸಿ ನೋಡಿದೆ. ಒಬ್ಬ ಕನ್ನಡ, ಇನ್ನೊಬ್ಬ ಇಂಗ್ಲಿಷ್ ಲಿಟರೇಚರ್‌ನಲ್ಲಿ ಪಿಜಿ ಮಾಡಿದ್ದಾರೆ. ಇಬ್ಬರೂ ಅನಂತಪುರದ ಕೃಷ್ಣದೇವರಾಯ ಯೂನಿವರ್ಸಿಟಿಯಲ್ಲಿ ಓದಿದ್ದಾರೆ. ಇಬ್ಬರ ಮಾತೃಭಾಷೆಯೂ ಕನ್ನಡ. ಆದರೆ, ಅವರ ಮೇಲೆ ತೆಲುಗು ಇನ್‌ಫ್ಲೂಯೆನ್ಸ್ ಸ್ವಲ್ಪ ಜಾಸ್ತೀನೆ ಇದೆ. ಎಡಿಟಿಂಗ್ ಚೆನ್ನಾಗಿ ಕಲಿತಿದ್ದಾರೆ. ನಮ್ಮಲ್ಲಿ ಸೇರೋ ಮೊದಲು ಬೇರೆ ಯಾವುದಾದರೂ ಪತ್ರಿಕೆಯಲ್ಲಿ ಕೆಲಸ ಮಾಡಿರಬಹುದು ಅಂತ ನಂಗೆ ಅನುಮಾನ. ಕೇಳಿದರೆ ಇಲ್ಲ ಅಂತಾರೆ. ಇಬ್ಬರದೂ ಮಾತು ಜಾಸ್ತಿ. ಅಕ್ಕ ಪಕ್ಕ ಇರೋರನ್ನು ನಗಿಸಿಕೊಂಡು ಕೆಲಸ ಮಾಡ್ತಾರೆ...'

'ವೆರಿ ಇಂಟೆರೆಸ್ಟಿಂಗ್ ಗೈಸ್... ಅಂಥವರೇ ಅಲ್ವೇನ್ರಿ ನಮಗೆ ಬೇಕಾಗಿರೋದು. ನಮ್ಮ ಆಫೀಸಿನಲ್ಲಿ ನಗೋರೇ ಇಲ್ಲ. ಎಲ್ರೂ ಕಂಪ್ಯೂಟರ್‌ಗಳನ್ನು ನೋಡಿಕೊಂಡು ಹರಳೆಣ್ಣೆ ಕುಡಿದವರ ಥರ ಮುಖ ಮಾಡಿಕೊಂಡು ಕೂತಿರ್ತಾರೆ...' ಅನ್ನುತ್ತ ಇಬ್ಬರನ್ನೂ ನನ್ನ ಚೇಂಬರ್‌ಗೆ ಕಳಿಸಿ... 'ಐ ಹ್ಯಾವ್ ಟು ಟಾಕ್ ಟು ದೆಮ್...' ಅಂತ ಹೇಳಿ ಮೀಟಿಂಗ್ ರೂಮ್‌ನಿಂದ ಎದ್ದು ಹೋದರು.

'ಸರ್, ಇಬ್ಬರೂ ಈ ವಾರವೂ ನೈಟ್ ಶಿಫ್ಟ್‌ನಲ್ಲಿದ್ದಾರೆ' ಅಂತ ಸಂಪಾದಕರ ಚೇಂಬರಿನ ಬಾಗಿಲನ್ನು ಸ್ವಲ್ಪವೇ ತಳ್ಳಿ ತಲೆಯನ್ನಷ್ಟೇ ಒಳಕ್ಕೆ ತೂರಿಸಿ ಹೇಳಿದ ನ್ಯೂಸ್ ಎಡಿಟರ್ ತಮ್ಮ ಸೀಟಿಗೆ ಹೋಗಿ ಕೂತರು.

ತೇಜಸ್ವಿ, ಅಜಯ್ ಇಬ್ಬರನ್ನೂ ಚೇಂಬರ್‌ಗೆ ಕಳಿಸುವಂತೆ ಸಂಪಾದಕರು ಹೇಳಿದರಂತೆ ಅನ್ನೋದು ಆಫೀಸಿನಲ್ಲಿ ಸಣ್ಣ ಸಂಚಲನ ಉಂಟು ಮಾಡಿತು. ಯಾಕೆ ಕರೆಸಿರಬಹುದು ಅಂತ ಕೆಲವರು ತಲೆಕೆಡಿಸಿಕೊಂಡರು. ಇಷ್ಟು ಬೇಗ ಹೊಸಬರನ್ನು ಕರೆಸಿ ಮಾತಾಡೋವಂಥದ್ದು ಏನಿರಬಹುದು ಅಂತಲೂ ಮಾತಾಡಿಕೊಂಡರು. ಎರಡು ತಿಂಗಳ ಅನಂತರ ಆಫೀಸಿಗೆ ಬಂದಿದ್ದ ಸಂಪಾದಕರು ಸಂಜೆವರೆಗೂ ಚೇಂಬರ್‌ನಲ್ಲೇ ಇದ್ದರು. ಒಬ್ಬೊಬ್ಬರೇ ಸೀನಿಯರ್‌ಗಳನ್ನು ಕರೆಸಿಕೊಂಡು ಮಾತಾಡಿದರು. ಏಳು ಗಂಟೆವರೆಗೂ ಇದ್ದು, ಎಡಿಷನ್ ಮೀಟಿಂಗ್‌ನಲ್ಲೂ ಸ್ವಲ್ಪ ಹೊತ್ತು ಕೂತಿದ್ದರು.

★★★